


"ಇದಕ್ಕೆ ಉತ್ತರ ಕೊಡೋದು ಕಷ್ಟ. ಈ ಹಂತದಲ್ಲಿ ಜನಕ್ಕೆ ತಾವು ದ್ವೇಷವನ್ನು ಹರಡುತ್ತಿದ್ದೇವೆ ಎನ್ನುವ ಅರಿವಿದೆಯೇ ಎನ್ನುವುದೇ ನನಗೆ ಅನುಮಾನ. ಏಕೆಂದರೆ ಅದನ್ನು ಅವರು ಭಾರತೀಯತೆ ಅಂತ ಭಾವಿಸುತ್ತಿದ್ದಾರೆ. ಇಡೀ ವಾತಾವರಣದಲ್ಲಿ ಒಂದಿಷ್ಟು ಬದಲಾವಣೆ ಆಗುವವರೆಗೆ ಅದು ಸಾಧ್ಯ ಎಂದು ನನಗನ್ನಿಸುತ್ತಿಲ್ಲ. ಸೃಜನಶೀಲವಾಗಿ ತೊಡಗಿಸಿಕೊಂಡಾಗ ಮಾತ್ರ ಸಾಧ್ಯವೆನಿಸುತ್ತದೆ. ವಿಭಿನ್ನ ಸಂವಾದಗಳನ್ನು ಒಂದೆಡೆ ತರುವುದರ ಮೂಲಕ ಕಲಾವಿದರನ್ನು ಒಟ್ಟಿಗೆ ತರಲು ಸಾಧ್ಯವಾಗಬಹುದು ಎನಿಸುತ್ತದೆ. ಕೊನೆಯ ಪಕ್ಷ ಅಂತಹ ಮಾತುಕತೆಯಲ್ಲಿ ತೊಡಗಬಹುದು. ಅದರಿಂದೇನಾದರೂ ಒಳ್ಳೆಯದಾಗಬಹುದು."

ಟಿ.ಎಂ. ಕೃಷ್ಣ ಸಂಗೀತದಲ್ಲಿ ಒಮ್ಮೊಮ್ಮೆ ತರುವ ಮಾರ್ಪಾಟುಗಳು ನಮ್ಮ ಸಂಗೀತ ಪರಂಪರೆಗೆ ಅನುಗುಣವಾಗೇ ಇವೆ. ನಮ್ಮದು ಧರ್ಮನಿರಪೇಕ್ಷ ಸಂಗೀತ ಪರಂಪರೆ. ಶಿಶುನಾಳ ಶರೀಫ, ಕಬೀರ ಮುಂತಾದವರನ್ನೂ ಒಳಗುಮಾಡಿಕೊಂಡ ಪರಂಪರೆ. ಮುಸ್ಲಿಂ ಹಾಡುಗಾರ ಶ್ರೀರಾಮನನ್ನು ಹೊಗಳಿ ಹಾಡಿದ್ದನ್ನು ಮೆಚ್ಚಿಕೊಂಡಂತೆಯೇ ಹಿಂದೂ ಸಂಗೀತಗಾರ ಏಸು, ಅಲ್ಲಾರನ್ನು ಕುರಿತು ಹಾಡಿದಾಗಲೂ ಪ್ರೀತಿಯಿಂದಲೇ ಒಳತೆಗೆದುಕೊಳ್ಳುವ ಮನಸ್ಸುಗಳಿವೆ. ನಮ್ಮ ಪರಂಪರೆ ನಮಗೆ ಕಲಿಸಿರುವುದು ಅದನ್ನೇ. 'ಈಶ್ವರ ಅಲ್ಲಾ ತೆರೋ ನಾಮ್, ಸಬ್‌ಕೋ ಸನ್ಮತಿ ದೇ ಭಗವಾನ್.'

## ಶೈಲಜ ಮತ್ತು ಟಿ.ಎಸ್. ವೇಣುಗೋಪಾಲ್

ಈ ಬರಹಗಾರ ದಂಪತಿ ನಿವೃತ್ತ ಅಧ್ಯಾಪಕರು. ಇವರಿಬ್ಬರ ಆಸಕ್ತಿಯ ಕ್ಷೇತ್ರ ಸಂಗೀತ ಮತ್ತು ಅನುವಾದ. ಪ್ರಸ್ತುತ ಮೈಸೂರಿನಲ್ಲಿ ನೆಲೆಸಿರುವ ಅವರು ಸಂಗೀತದ ತಿಳಿವನ್ನು ಹೆಚ್ಚಿಸುವ ಸರಣಿ ಪುಸ್ತಕಗಳನ್ನು 'ರಾಗಾಮಾಲ' ಪ್ರಕಾಶನದಿಂದ ಪ್ರಕಟಿಸಿದ್ದಾರೆ. ಇವರ ಅನುವಾದಿತ ಪುಸ್ತಕಗಳೂ ಪ್ರಕಟವಾಗಿವೆ.